



## ಹೋಗುವುದು ಹೇಗೆ?

ತಿರುವನಂತಪುರಂನಿಂದ 55 ಕಿ.ಮೀ. ದೂರದಲ್ಲಿರುವ ಈ ಅರಮನೆ, ಕನ್ಯಾಕುಮಾರಿಯಿಂದ 39 ಕಿ.ಮೀ. ಅಂತರದಲ್ಲಿದೆ. ಈ ನಗರಗಳ ನಡುವೆ ಸಂಚರಿಸುವ ಯಾವುದೇ ಬಸ್ಸನ್ನೇ ಏರಿದರೂ, ತುಕ್ಕಲೇ ಎಂಬ ಸ್ಥಳದಲ್ಲಿ ಇಳಿದುಕೊಳ್ಳಬೇಕು. ಅಲ್ಲಿಂದ ಅರಮನೆಗೆ ಎರಡೇ ಕಿಲೋಮೀಟರ್. ಬೆಂಗಳೂರಿನಿಂದ ರೈಲಿಗೆ ಬರುವವರು ನಾಗರಕೊಯ್ಲಿನಲ್ಲಿ ಇಳಿದುಕೊಂಡರೆ, ಅಲ್ಲಿಂದ 15 ಕಿ.ಮೀ. ದೂರದಲ್ಲಿರುವ ಅರಮನೆಗೆ ಆಟೊ ಅಥವಾ ಟ್ಯಾಕ್ಸಿಗಳಲ್ಲಿ ಹೋಗಬಹುದು.

14 ಕಟ್ಟಡಗಳ ಸಂಕೀರ್ಣ ಜೋಡಣೆಯಾದ ಈ ಅರಮನೆಯು, ಸುಮಾರು 6.5 ಎಕರೆ ವಿಸ್ತೀರ್ಣದಲ್ಲಿದೆ. ಸ್ವಾಗತ ಸಭಾಂಗಣ, ಮುಖ್ಯ ವಾಸಕೋಣೆ, ತಾಯಿಯ ಅರಮನೆ, ಅಂತಃಪುರ, ಊಟದ ಹಜಾರ, ಪ್ರಾರ್ಥನಾ ಮಂದಿರ, ಆಯುಧಪುರ, ಚಂದ್ರವಿಲಾಸ (ಮನರಂಜನಾ ಸಭಾಂಗಣ), ನವರಾತ್ರಿ ಮಂಟಪ – ಹೀಗೆ ಹತ್ತು ಭಾಗಗಳನ್ನು ಒಳಗೊಂಡಿರುವ ಈ ಬಹು ಅಂತಸ್ತಿನ ಅರಮನೆ, ಸಾಗಿದಷ್ಟೂ ಮುಗಿಯದೇನೋ ಎಂಬ ಭಾವನೆ ಉಂಟುಮಾಡುತ್ತದೆ.

‘ಉತ್ತುಪುರ’ ಎಂದು ಕರೆಯಲಾಗುವ ಊಟದ ಹಜಾರ ಒಮ್ಮೆಗೆ ಸಾವಿರ ಮಂದಿಗೆ ಊಟ ಬಡಿಸುವಷ್ಟು ವಿಸ್ತಾರವಾದುದು.



ಪದ್ಮನಾಭಪುರಂ ಅರಮನೆ ತಮಿಳುನಾಡಿನಲ್ಲಿದ್ದರೂ, ಅದು ಕೇರಳ ಸರ್ಕಾರದ ನಿರ್ವಹಣೆಯ ವ್ಯಾಪ್ತಿಗೆ ಒಳಪಟ್ಟಿದೆ. ‘ತಕ್ಕುಶಾಸ್ತ್ರ’ ಎಂಬ ಸಾಂಸ್ಕೃತಿಕ ವಾಸ್ತುಶಿಲ್ಪದ ಮಾದರಿಯಲ್ಲಿ ನಿರ್ಮಿತವಾದ ಈ ಅರಮನೆ, ಹಲಾವಾರು ಕಡೆಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಶಿಲ್ಪಕಲೆಯನ್ನು ಹೋಲುತ್ತದೆ. ಮರದ ಸಂಕೀರ್ಣ ಕೆತ್ತನೆಗಳು ಆಗಿನ ಕಾಲದಲ್ಲಿ ಬದುಕಿದ್ದ ಬಡಗಿಗಳ ನೈಪುಣ್ಯವನ್ನು ಸಾರಿ ಸಾರಿ ಹೇಳುವಂತಿವೆ. 64 ರೀತಿಯ ಗಿಡಮೂಲಿಕೆಗಳ ಮರಗಳಿಂದಲೇ ತಯಾರಾದ ರಾಣಿಯ ಮಂಚ, ಮರದ ಕುರ್ಚಿಗಳು, ಸಂಗ್ರಹಿಸಿಟ್ಟ ಐತಿಹಾಸಿಕ ವಸ್ತುಗಳು ನಮ್ಮನ್ನು ಗತಕಾಲಕ್ಕೆ ಕರೆದೊಯ್ಯುತ್ತವೆ. ಅರಮನೆ ಸಂಕೀರ್ಣದ 14 ಕಟ್ಟಡಗಳಿಗೆ ಪರಸ್ಪರ ಸಂಪರ್ಕವಿದ್ದು, ಒಂದೆಡೆಯಿಂದ ಮತ್ತೊಂದೆಡೆಗೆ ಸರಾಗವಾಗಿ ಚಲಿಸಬಹುದು.

ಹೆಚ್ಚು ಮಳೆಯಾಗುವ ವಾತಾವರಣಕ್ಕೆ ಹೊಂದುವಂತೆ ಕಲ್ಲು ಮತ್ತು ಮರದ ಸ್ವರಮೇಳದಲ್ಲಿ ಕಟ್ಟಿದ ಈ ಅರಮನೆ, ತಾನೇ ಒಂದು ಕಲಾಕೃತಿಯಾಗಿ ನೋಡುಗರನ್ನು ಸೆಳೆಯುತ್ತದೆ.

ಸುಮಾರು 400 ವರ್ಷಗಳ ಇತಿಹಾಸವಿರುವ ಪದ್ಮನಾಭಪುರದ ಅರಮನೆ, ತಿರುವಾಂಕೂರು ಅರಸರ ಕಾಲಕ್ಕೆ ಸೇರಿದ್ದು ಎನ್ನಲಾಗಿದೆ. 1592ರಿಂದ 1609ರವರೆಗೆ ಆಳ್ವಿಕೆಯಲ್ಲಿದ್ದ ಇರವಿ ವರ್ಮ ಕುಲಶೇಖರ ಎನ್ನುವ ರಾಜ ಕಟ್ಟಿಸಿದ ಈ ಅರಮನೆ, ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯಲ್ಲಿದೆ.

ಅರಮನೆಯ ಮುಂಭಾಗದಲ್ಲಿ ಸುಮಾರು ಮುನ್ನೂರು ವರ್ಷ ಹಳೆಯದಾದ ಗಡಿಯಾರವಿದ್ದು, ಅದು ಈಗಲೂ ಸಮಯವನ್ನು ಸರಿಯಾಗಿ ತೋರಿಸುತ್ತದೆ. ಅರಮನೆಯಲ್ಲಿ ರಾಜರಿಗೆಂದೇ ರಹಸ್ಯ ಮಾರ್ಗವೊಂದಿದ್ದು, ಅದು ಚರೊಟ್ಟು ಕೊಟ್ಟಾರಂ ಎಂಬ ಮತ್ತೊಂದು ಅರಮನೆಗೆ ಸಂಪರ್ಕ ಕಲ್ಪಿಸುತ್ತದಂತೆ. ಈಗ ಆ ಮಾರ್ಗವನ್ನು ಮುಚ್ಚಲಾಗಿದೆ.

ಚೀನಾದ ವರ್ತಕರು ನೀಡಿದ ಉಡುಗೊರೆಗಳು, ಹಿತ್ತಾಳೆಯ ದೀಪಗಳು, ಇತಿಹಾಸ ಸಾರುವ ಚಿತ್ರಕಲೆಗಳು, ಆಯುಧಗಳು – ಹೀಗೆ ಹತ್ತು ಹಲವು ಆಕರ್ಷಣೆಗಳು ಅರಮನೆಯಲ್ಲಿ ಕಾಣಸಿಗುತ್ತವೆ. ದಿನವಿಡೀ ನೋಡಿದರೂ ಮುಗಿಯದಷ್ಟು ವಿಸ್ತಾರವಾಗಿಯೂ, ಕಣ್ಮನ ತಣಿಸುವಷ್ಟು ಮನೋಹರವಾಗಿಯೂ ಕಾಣಿಸುವ ಈ ಅರಮನೆ, ಪ್ರವಾಸಿಗರ ಮನದಲ್ಲಿ ಸದಾ ಹಸಿರಾಗಿ ಇರಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in